ಎಂ.ಇ.ಎಸ್.
ಸಮೂಹ ಶಿಕ್ಷಣ ಸಂಸ್ಥೆ, ಶಿರಸಿ
ಇ-ತ್ರೈಮಾಸಿಕ ಸುದ್ದಿ ಪತ್ರಿಕೆ
M.E.S.
Group Educational Institutions
e- Quarterly Newsletter



Vol-1(2) | Aiming Academic Advancement | Oct-Dec 2023

## ಹೆಚ್ಚಿನ ಉದ್ಯೋಗಾವಕಾಶವಿರುವ ಐ.ಟಿ.ಐ ಶಿಕ್ಷಣ

ಎಸ್.ಎಸ್.ಎಲ್.ಸಿ. ನಂತರ ಪಿಯುಸಿಗೆ ತತ್ಸಮಾನವಾದ, ವೃತ್ತಿಆಧಾರಿತ ಹಾಗೂ ಹೆಚ್ಚಿನ ಉದ್ಯೋಗಾವಕಾಶವಿರುವುದು ಐ.ಟಿ.ಐ. ಶಿಕ್ಷಣವಾಗಿದೆ.

ಒಂದು ಹೊತ್ತಿನ ಊಟಕ್ಕೆ ಮನೆಯಲ್ಲಿ ತೊಂದರೆ ಇದ್ದರೂ, ಎಷ್ಟೇ ಕಷ್ಟ, ಬಡತನವಿದ್ದರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಬೇಕು, ತಮ್ಮಂತೆ ಮಕ್ಕಳು ಕಷ್ಟಪಡಬಾರದು, ಉತ್ತಮ ಶಿಕ್ಷಣ ಪಡೆದು ಒಳ್ಳೆಯ ಉದ್ಯೋಗ ಪಡೆಯಬೇಕೆಂಬ ಕನಸು ಎಲ್ಲ ಪಾಲಕರದ್ದು.ಆದರೆ ತಮ್ಮ ಮಕ್ಕಳ ಸಾಮರ್ಥ್ಯವೇನು? ತಮ್ಮ ಆರ್ಥಿಕ ಪರಿಸ್ಥಿತಿಗನುಸಾರ ನಮ್ಮ ಮಕ್ಕಳಿಗೆ ಯಾವ ಶಿಕ್ಷಣ ನೀಡಿದರೆ ಅವರು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂಬುದರ ಕುರಿತು ವಿಚಾರಮಾಡುವ ಸಾಮರ್ಥ್ಯವಿಲ್ಲದ ಅನಕ್ಷರಸ್ಥ ಪಾಲಕರ ಸಮೂಹ ಒಂದು ಕಡೆಯಾದರೆ, ಶಿಕ್ಷಣ ಪಡೆದ ಬಹಳ ಪಾಲಕರ ವಿಚಾರ ಇನ್ನೊಂದು ರೀತಿ, ತಮ್ಮ ಮಕ್ಕಳು ತಮಗಿಂತ ಹೆಚ್ಚಿನ ಶಿಕ್ಷಣ ಪಡೆಯಬೇಕು, ಇಂಜಿನಿಯರ್ ಆಗಬೇಕು, ಡಾಕ್ಟರ್ ಆಗಬೇಕೆಂದು ತಾವೇ ನಿರ್ಧರಿಸಿ ಬಿಡುತ್ತಾರೆ. ಮಕ್ಕಳ ಸಾಮರ್ಥ್ಯ ಮತ್ತು ಆಸಕ್ತಿಯನ್ನು ಪರಿಗಣಿಸುವುದೇ ಇಲ್ಲ. ಪ್ರತಿಯೊಬ್ಬ ಪಾಲಕರಿಗೂ ತಮ್ಮ ಮಕ್ಕಳು ಉನ್ನತ ವ್ಯಾಸಂಗ ಮಾಡಿ. ಉತ್ತಮ ಉದ್ಯೋಗದಲ್ಲಿ ಇರಬೇಕೆಂಬ ಹಂಬಲ ಸ್ವಾಭಾವಿಕ. ಪ್ರಯತ್ನಪಟ್ಟರೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದು ಅಕ್ಷರಶಃ ಸತ್ಯ. ಆದಾಗ್ಯೂ ನಮ್ಮ ಕೈನ ಐದೂ ಬೆರಳುಗಳು ಹೇಗೆ ಸಮನಾಗಿರುವುದಿಲ್ಲವೋ ಅಂತೆಯೇ ಎಲ್ಲರೂ ಇಂಜಿನೀಯರ್/ ಡಾಕ್ಟರ್ / ಚಾರ್ಟೆಡ್ ಅಕೌಂಟೆಂಟ್/ ಸೈಂಟಿಸ್ಟ್ / ಐ.ಎ.ಎಸ್. /ಐ.ಪಿ.ಎಸ್. ಅಧಿಕಾರಿ ಅಥವಾ ಉನ್ನತ ಪದವಿ ಪಡೆದು ಉನ್ನತ ಮಟ್ಟದ ಉದ್ಯೋಗ ಪಡೆಯಲು ಸಾಧ್ಯವಿಲ್ಲ. ಅದು ಅವರ ಓದಿನ ಸಾಮರ್ಥ್ಯ, ಲಭ್ಯವಿರುವ ಅವಕಾಶಗಳು, ಸರಿಯಾದ ಬುನಾದಿ ಹಾಗೂ ಇವತ್ತಿನ ದಿನದಲ್ಲಿ ಆರ್ಥಿಕ ಅನುಕೂಲತೆಯ ಮೇಲೆ ಕೂಡ ಅವಲಂಬಿತವಾಗಿದೆ.

ವಿದ್ಯಾರ್ಥಿ ಜೀವನದಲ್ಲಿ ಎಸ್.ಎಸ್.ಎಲ್.ಸಿ.ಯ ನಂತರದ ಶಿಕ್ಷಣದ ಆಯ್ಕೆ ಅತ್ಯಂತ ಮಹತ್ವವಾದದ್ದು. ಎಸ್.ಎಸ್.ಎಲ್.ಸಿ. ನಂತರದ ಶಿಕ್ಷಣದ ಸೂಕ್ತ ಆಯ್ಕೆ ವಿದ್ಯಾರ್ಥಿಯ ಮುಂದಿನ ಭವಿಷ್ಯವನ್ನು ನಿರ್ಧರಿಸಿ, ನಿಗದಿತ ಗುರಿಯನ್ನು ಮುಟ್ಟಲು ಬುನಾದಿಯಾಗಿರುತ್ತದೆ. ಎಸ್.ಎಸ್.ಎಲ್.ಸಿ. ನಂತರ ಪಿ.ಯು.ಸಿ., ಡಿಪ್ಲೋಮಾ ಇಂಜಿನಿಯರಿಂಗ್, ಶಿಕ್ಷಣ ತರಬೇತಿ ಕೋರ್ಸುಗಳು, ವಾಣಿಜ್ಯ ಸಂಬಂಧಿತ ಕೋರ್ಸುಗಳು, ವೃತ್ತಿ ಸಂಬಂಧಿತ ಐ.ಟಿ.ಐ. ಕೋರ್ಸುಗಳು, ನರ್ಸಿಂಗ್ ಕೋರ್ಸ ಹೀಗೆ ಅನೇಕ ಆಯ್ಕೆಗಳಿವೆ.

ಎಸ್.ಎಸ್.ಎಸ್.ಎಲ್.ಸಿ.ಯಲ್ಲಿ ಕನಿಷ್ಠ ಅಥವಾ ಮಧ್ಯಮ ಅಂಕ ಪಡೆದು ಉತ್ತೀರ್ಣರಾದವರು/ಎಸ್.ಎಸ್.ಎಲ್.ಸಿ.ಯ ನಂತರ ಹೆಚ್ಚಿನ ವರ್ಷ ಓದಲು ಅನುಕೂಲವಿಲ್ಲದವರು, ಪಿ.ಯು.ಸಿ.ಪಾಸ್/ಫೇಲ್ ಆಗಿ ಉದ್ಯೋಗಕ್ಕೆ ಪೂರಕವಾದ ತರಬೇತಿ ಪಡೆಯಲಿಚ್ಛಿಸುವವರು / ಉನ್ನತ ಮಟ್ಟದ ಶಿಕ್ಷಣ ಪೂರೈಸಲು ಸಾಧ್ಯವಿಲ್ಲದವರು ಹಾಗೂ ವೃತ್ತಿ ನೈಪುಣ್ಯತೆ ಪಡೆದು ಎಸ್.ಎಸ್.ಎಲ್.ಸಿ. ನಂತರ ಕೇವಲ 1 ಅಥವಾ 2ವರ್ಷದ ಅವಧಿಯ ತರಬೇತಿ ಪಡೆದು ಉದ್ಯೋಗ ಬಯಸುವವರಿಗೆ ಅಥವಾ ಸ್ವ-ಉದ್ಯೋಗ ಮಾಡಬಯಸುವವರಿಗೆ ಐ.ಟಿ.ಐ. ಶಿಕ್ಷಣ ಉತ್ತಮ ಆಯ್ಕೆಯಾಗಿದೆ.

ಐ.ಟಿ.ಐ. ಶಿಕ್ಷಣದಲ್ಲಿ ಶೇ. 75 ಭಾಗ ಪ್ರಾಯೋಗಿಕ ಅಧ್ಯಯನವಿರುತ್ತದೆ. ಕೈಗಾರಿಕಾ ವಲಯದ ವಿವಿಧ ವಿಷಯಗಳನ್ನು ಇದು ಒಳಗೊಂಡಿರುತ್ತದೆ. ಇಲ್ಲಿ ಪ್ರಾಯೋಗಿಕ ತರಬೇತಿಯೇ ಪ್ರಾಮುಖ್ಯವಾಗಿರುವುದರಿಂದ ಓದಿನಲ್ಲಿ ಸ್ವಲ್ಪ ಕೆಳಮಟ್ಟದಲ್ಲಿರುವ ವಿದ್ಯಾರ್ಥಿಗಳೂ ಕೂಡ ಪ್ರಾಯೋಗಿಕ ತರಬೇತಿಯಿಂದ ಸುಲಭವಾಗಿ ಅರ್ಥೈಸಿಕೊಂಡು ವೃತ್ತಿ ನೈಪುಣ್ಯತೆ ಹೊಂದಬಹುದಾಗಿದೆ.

ಐ.ಟಿ.ಐ. ವೃತ್ತಿ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಸರಕಾರಿ, ಅರೆಸರಕಾರಿ ಹಾಗೂ ಖಾಸಗಿ ಕೈಗಾರಿಕಾ ವಲಯಗಳ ಮತ್ತು ಹೊರದೇಶಗಳಲ್ಲಿ ಕೂಡ ಅನೇಕ ಉದ್ಯೋಗಾವಕಾಶಗಳಿವೆ. ಇವುಗಳಲ್ಲದೆ ಸ್ವ-ಉದ್ಯೋಗ ಮಾಡಬಯಸುವ ಅಭ್ಯರ್ಥಿಗಳಿಗೆ ಈ ವೃತ್ತಿ ತರಬೇತಿ ಸೂಕ್ತ ವೇದಿಕೆಯಾಗಿದ್ದು ಇಲೆಕ್ಟ್ರಿಕಲ್ ವೈರಮೆನ್/ ವೆಲ್ಡರ್/ ಟರ್ನರ್/ ಫ್ಯಾಬ್ರಿಕೇಟರ್/ ಇಲೆಕ್ಟ್ರಿಕಲ್ ಉಪಕರಣಗಳ ರಿಪೇರಿಂಗ್/ಇಲೆಕ್ಟ್ರಾನಿಕ್ಸ್ ಉಪಕರಣಗಳಾದ ಟಿ.ವಿ., ಮೊಬೈಲಗಳ ರಿಪೇರಿ, ಸೋಲಾರ್ ಅಳವಡಿಕೆ ಮತ್ತು ರಿಪೇರಿ ಹೀಗೆ ತರಬೇತಿ ಪೂರ್ಣಗೊಳಿಸಿದ ಬಳಿಕ ಸಂಬಂಧಿತ ಕ್ಷೇತ್ರಗಳಲ್ಲಿ ವಿಪುಲ ಸ್ವಉದ್ಯೋಗಾವಕಾಶಗಳಿವೆ. ಐ.ಟಿ.ಐ.ನಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಸರಕಾರದಿಂದ ಮಾನ್ಯತೆ ಪಡೆದ ಸರಕಾರಿ / ಖಾಸಗಿ ಕೈಗಾರಿಕೆಗಳಲ್ಲಿ 1ವರ್ಷ ಅವಧಿಯ ಅಪ್ರೆಂಟಿಸ್‌ಶಿಪ್ (ATS) ತರಬೇತಿಯನ್ನು ಪಡೆದು ಉನ್ನತ ಉದ್ಯೋಗಕ್ಕೆ ಸೇರಬಹುದಾಗಿದೆ.

ಎಸ್.ಎಸ್.ಎಲ್.ಸಿ.ಯ ನಂತರ ಕೇವಲ 1 ಅಥವಾ 2ವರ್ಷದ ಐ.ಟಿ.ಐ. ಶಿಕ್ಷಣ ಪಡೆದು ಖಾಸಗಿ ವಲಯಗಳಲ್ಲಿ ಉದ್ಯೋಗ ಮಾಡುವ ಅಭ್ಯರ್ಥಿಗಳಿಗೆ ಉದ್ಯೋಗ ಮಾಡುವ ಕಂಪೆನಿ ಹಾಗೂ ಆತನ ನೈಪುಣ್ಯತೆ ಆಧರಿಸಿ ಪ್ರಾರಂಭದಲ್ಲಿಯೇ ಕನಿಷ್ಠ ಮಾಸಿಕ ರೂ. 15,000 ದಿಂದ 25,000 ವೇತನ ದೊರೆಯುತ್ತದೆ. 5 ರಿಂದ 10 ವರ್ಷ ಅನುಭವ ಪಡೆದು ಉತ್ತಮ ಕಂಪೆನಿ/ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೈಪುಣ್ಯ ಅಭ್ಯರ್ಥಿಗಳು ಮಾಸಿಕ ರೂ. 30,000 ಗಳಿಂದ ರೂ. 80,000 ವೇತನ ಪಡೆಯುತ್ತಿರುವವರೂ ಅನೇಕರಿದ್ದಾರೆ.

ಎಸ್.ಎಸ್.ಎಲ್.ಸಿ. ನಂತರ 2ವರ್ಷ ಅವಧಿಯ ಐ.ಟಿ.ಐ.ತರಬೇತಿ

*(4 ನೇ ಪುಟಕ್ಕೆ ಮುಂದುವರೆದಿದೆ...)*

## MES Group Offers Education from Kindergarten ( KG) to Post Graduation (PG)

• Pre-Primary (English medium) • Primary(Kannada and English medium) • High school (Kannada and English medium) • 2-Year Pre-University Courses in Arts, Science, and Commerce • 3- Year Degree Courses in Arts (with major History, Journalism, Political Science, Music, English and Sociology), Science(With major Physics, Chemistry, Maths, Botany, Zoology, Computer Science and Biotechnology) • 3- Year Degree Course in Commerce • 2-Year post Graduate Studies in Mathematics(M. Sc) and Commerce (M.Com) • 3- Year Degree Course in Law • 2-Year I.T.I Courses in Electrician, Electronics Mechanic and Fitter • 3-Year Diploma Courses in Civil, Electrical and Electronics( E&E), Electronics and Communication(E &C), Mechanical • 3-Year Diploma Course in General Nursing • Short duration Certificate Courses

### Our Institutions

• MM Arts and Science College *(mmcartsandsciencesirsi.co.in)* : ☏ 08384-295677
• Commerce College *(mescсsirsi.co.in)* : ☏ 08384-236298
• Law College *(meslawcollegesirsi.co.in)* : ☏ 08384-295688
• PU College *(mespucollegesirsi.in)* : ☏ 08384-234881
• Chaitanya PU College *(meschaitanyasirsi.org)* : ☏ 9481099839
• Nursing Institute : ☏ 08384-295984
• RNS Polytechnic *(mesrnsptsirsi.com)* : ☏ 08384-295658
• Private ITI *(mesitisirsi.org)* : ☏ 08384-295842
• Kannada Medium Primary School : ☏ 08384-236900
• Telang High School (formerly Sahyadri ) : ☏ 08384-238899
• English Medium School : ☏ 08384-236060

HAPPY NEW YEAR 2024

ಪುಟ ಪ್ರಾಯೋಜಕತ್ವ : ದಿವಾಕರ ಎಂ. ಭಟ್, ಕೆರೆಹೊಂಡ

## MES e-Quarterly Newsletter

This is the publication of Modern Education Society (MES), Vidyanagar, Sirsi-581402, Uttara Kannada District, Karnataka.
+917019795455
*mesacademics1@gmail.com*
*www.messirsi.org*

Patron : G. M. Hegde, Mulkhand, President
Advisory Board : Bheemanna Naik, M. L. A, Vice President
Nitin Kasarkod, Vice President
Dr. M. G. Hegde,Gadimane. Vice President
S. P. Shetty, Hon. Gen. Secretary
Sudhir Bhat, Treasurer
G. S. Bhat, Upponi , Jt. Secretary
Dr. R. N. Hegde, Bhandimane, Jt. Secretary
Editorial Team: (Staff) Venkatagiri Hegde, Editor
Raghavendra Hegde, Jajigudde
Sharada Bhat

## About MES

Modern Education Society(MES) was founded in 1961 to provide higher education to the aspirants of rural area around Sirsi in Uttara Kannada District of Karnataka. MES is running 16 educational institutions right from Kindergarten (KG) to Post Graduate(PG) studies in different disciplines. Over a lakh students have studied in MES and entered in to different professions to lead a decent life both in India and abroad.

## MES e-Newsletter

This is a medium of communication among stakeholders say management, faculty, staff, students and alumni. Authors are requested to send typed material in English/Kannada addressed to Editor, MES e-Newsletter, MES Administrative office, vidyanagar Sirsi - 581402 by post /e-mail. The matter published need not reflect the views of MES. Authors are solely responsible for articles published under their name. Right to edit and publish the material rests with the editor. Current and back issues are available at www.messirsi.org

## MES Vision and Mission

To provide affordable quality education while equipping students with knowledge and skills in their chosen streams, inculcate values, identify hidden talents, provide opportunities for students to realize their full potential and mould them in to future leaders, entrepreneurs and above all good citizens. To build a community of students, faculty and staff that pursue learning from a diverse global perspectives to make the world ever better.

## ಅಧ್ಯಕ್ಷರ ಲೇಖನಿಯಿಂದ

# ಖಾಸಗಿ ಶಿಕ್ಷಣ ಸಂಸ್ಥೆಗಳು ಎದುರಿಸಲೇಬೇಕಾದ ಸವಾಲುಗಳು



ತಮ್ಮ ಮಕ್ಕಳನ್ನು ಶಾಲೆ, ಹೈಸ್ಕೂಲ್,ಕಾಲೇಜುಗಳಿಗೆ ಕಳುಹಿಸಬೇಕೆಂಬ ಇಚ್ಛೆ ಹಲವು ಪಾಲಕರಲ್ಲಿ ಜಾಗ್ರತಗೊಂಡ ಐವತ್ತರ ದಶಕದಲ್ಲಿ, ಗುಡ್ಡಗಾಡು ಜಿಲ್ಲೆಯಾದ ಉತ್ತರಕನ್ನಡದಲ್ಲಿ ಅಲ್ಲಲ್ಲಿ ಕೆಲವು ಸರ್ಕಾರಿ ಪ್ರಾಥಮಿಕ ಶಾಲೆಗಳು ಮಾತ್ರ ಇದ್ದವು.ಹಳ್ಳಿಗಾಡಿನ ಜನರಿಗೆ ಹೈಸ್ಕೂಲ್ ಶಿಕ್ಷಣವೇ ಮರೀಚಿಕೆಯಾದ ದಿನಗಳವು.

ತಮ್ಮ ಊರಿನ ಮತ್ತು ಸುತ್ತಮುತ್ತಲಿನ ವಿದ್ಯಾರ್ಥಿಗಳಿಗೆ ಶಿಕ್ಷಣ ಲಭ್ಯವಾಗಿಸಬೇಕೆಂಬ ಚಿಂತನಶೀಲರ ಪ್ರಯತ್ನದಿಂದ ಖಾಸಗಿ ಶಿಕ್ಷಣ ಸಂಸ್ಥೆಗಳು ಅಲ್ಲಲ್ಲಿ ಸ್ಥಾಪಿತಗೊಂಡು ಹೈಸ್ಕೂಲ್‌ಗಳು ಪ್ರಾರಂಭವಾದವು. ಕೆಲವು ವರ್ಷಗಳ ನಂತರ ಸರ್ಕಾರಿ ಅನುದಾನಕ್ಕೆ ಒಳಪಟ್ಟವು.

ಅಂದಿನ ಮುಂಬೈ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ಸರ್ಕಾರಿ ಕಾಲೇಜುಗಳೇ ಇಲ್ಲವೆಂಬ ಪರಿಸ್ಥಿತಿ ಇತ್ತು. ಕಾಲೇಜು ಶಿಕ್ಷಣ ಬೇಕೆನ್ನುವವರು ಧಾರವಾಡ ಅಥವಾ ಇನ್ನೂ ದೂರದ ಊರಿಗೆ ಹೋಗಬೇಕಾಗಿತ್ತು. ಅಂತಹ ಸಮಯದಲ್ಲಿ ಸಮಾಜದ ಹಿತಚಿಂತಕ ಧುರೀಣರು ಖಾಸಗಿ ರಂಗದಲ್ಲಿ ಕಾಲೇಜು ಪ್ರಾರಂಭಿಸಿದರು.ದಾನಿಗಳು ಹಾಗೂ ಜನಸಾಮಾನ್ಯರು ನೀಡಿದ ಚಿಕ್ಕ ಪುಟ್ಟ ದೇಣಿಗೆಗಳ ಸಹಾಯದಿಂದಲೇ ಐವತ್ತು ಅರವತ್ತರ ದಶಕದಲ್ಲಿ ಪ್ರತಿ ತಾಲೂಕಿನಲ್ಲಿ ಒಂದೊಂದು ಕಾಲೇಜು ತಲೆ ಎತ್ತಿತು. ದಶಕಗಳ ಬೇಡಿಕೆ, ಒತ್ತಾಯದ ನಂತರ ಈ ಕಾಲೇಜುಗಳು ಸರ್ಕಾರದ ಅನುದಾನಕ್ಕೆ ಒಳಪಟ್ಟವು. ಇದರಿಂದ ಸಾಧ್ಯವಾದಷ್ಟು ಕಡಿಮೆ ಶುಲ್ಕ ಪಡೆದು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಸದಾಶಯದಿಂದ ಪ್ರಾರಂಭಿಸಿದ ಸಂಸ್ಥೆಗಳಿಗೆ ಅವರ ಆಶಯಗಳ ಅನುಷ್ಠಾನಕ್ಕೆ ಸಹಾಯವಾಯಿತು. ಆದರೆ ತೊಂಬತ್ತರ ದಶಕದಿಂದೀಚೆಗೆ ನಿವೃತ್ತಿ, ಮರಣ, ರಾಜೀನಾಮೆ ಮುಂತಾದ ಕಾರಣಗಳಿಂದ ತೆರವಾದ ಅನುದಾನಿತ ಉಪನ್ಯಾಸಕರು ಹಾಗೂ ಬೋಧಕೇತರ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ನೇಮಕಾತಿಗೆ ಸರ್ಕಾರದ ಅನುಮತಿ ಸಿಗದ ಕಾರಣ ಖಾಲೀ ಇರುವ ಹುದ್ದೆಗಳಿಗೆ ಆಡಳಿತ ಮಂಡಳಿಗಳೇ ನೇಮಕಾತಿ ಮಾಡಿಕೊಂಡು ಸಂಬಳ ನೀಡುವ ಪರಿಸ್ಥಿತಿ ನಿರ್ಮಾಣವಾಗಿದೆ.ಯಾವುದೇ ಕಾರಣದಿಂದ ತೆರವಾಗುವ ಬೋಧಕೇತರ ಹುದ್ದೆಗಳಿಗೆ ಅನುದಾನ ನೀಡುವುದಿಲ್ಲವೆಂದು ಒಂದೂವರೆ ದಶಕದ ಹಿಂದೆ ಸರ್ಕಾರ ಆದೇಶ ಹೊರಡಿಸಿದೆ. ಕಟ್ಟಡ ನಿರ್ವಹಣೆ ಹಾಗೂ ಇತರ ಖರ್ಚು ವೆಚ್ಚಗಳಿಗೆ ನೀಡುತ್ತಿದ್ದ ಅನುದಾನವನ್ನು ದಶಕದ ಹಿಂದೆಯೇ ರದ್ದುಪಡಿಸಲಾಗಿದೆ.

ಹೀಗೆ ಹಲವು ಕಾರಣಗಳಿಂದಾಗಿ ಆಡಳಿತ ಮಂಡಳಿಗಳು ಭರಿಸಬೇಕಾದ ವೆಚ್ಚ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಈ ಭಾರವನ್ನು ಶುಲ್ಕದ ಹೆಚ್ಚಳದ ಮೂಲಕ ಸರಿದೂಗಿಸುವುದು ಅನಿವಾರ್ಯವಾಗುತ್ತಿದೆ. ಆದರೆ ಇದು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಭಾರವಾಗುತ್ತಿದೆ. ಐವತ್ತು ಅರವತ್ತರ ದಶಕದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭವಾದ ಶಾಲಾ ಕಾಲೇಜು ಸಂಸ್ಥೆಗಳು ಸೇವಾ ಉದ್ದೇಶದಿಂದ ಸ್ಥಾಪಿತಗೊಂಡವೇ ಹೊರತು ವಾಣಿಜ್ಯ ಉದ್ದೇಶದಿಂದಲ್ಲ. ಕಳೆದ ಆರೇಳು ದಶಕಗಳಿಂದ ಗುಣಮಟ್ಟದ ಶಿಕ್ಷಣ ನೀಡುತ್ತಾ ಬಂದ ಸಂಸ್ಥೆಗಳು ಇಂದು ಆರ್ಥಿಕ ಸವಾಲು ಎದುರಿಸುತ್ತಿವೆ.ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿ, ಪೋಷಕರಿಗೆ ಹೆಚ್ಚಿನ ಭಾರವಾಗದ ರೀತಿಯಲ್ಲಿ ಸಮಾಜದ ಹಿತಚಿಂತಕರು, ದಾನಿಗಳು ಹಾಗೂ ಹಳೆಯ ವಿದ್ಯಾರ್ಥಿಗಳ ನೆರವಿನಿಂದ ಸವಾಲನ್ನು ಎದುರಿಸಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಕಾರ್ಯವನ್ನು ಮುಂದುವರೆಸುವ ನಂಬಿಕೆ ನಮ್ಮ ಸಂಸ್ಥೆಗಿದೆ.

(ಜಿ. ಎಂ. ಹೆಗಡೆ, ಮುಳಖಂಡ)

## ಎಂ. ಇ. ಎಸ್. ನ ದತ್ತಿನಿಧಿಯ ದಾನಿಗಳ ಗಮನಕ್ಕೆ


ಎಂ.ಇ.ಎಸ್. ನಲ್ಲಿ ಸುಮಾರು 350 ದತ್ತಿನಿಧಿಗಳು ಇದ್ದು ಇದರ ಒಟ್ಟೂ ಠೇವಣಿ ಮೊತ್ತ ರೂ. 65 ಲಕ್ಷವಾಗಿದೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸುವುದು ಇದರ ಮೂಲ ಉದ್ದೇಶವಾಗಿದೆ. ಸಾರ್ವಜನಿಕರು ರೂ. 500/– ರಿಂದ ರೂ. 4.4 ಲಕ್ಷದವರೆಗೂ ಠೇವು ಇಟ್ಟವರು ಇರುತ್ತಾರೆ. ಕಾಲೇಜು ಪ್ರಾರಂಭವಾಗಿ 1964 ರಲ್ಲಿ ಬಂದ ಮೊದಲ ಬ್ಯಾಚ್‌ನಿಂದ 2023 ರವರೆಗೆ ವಿದ್ಯಾರ್ಥಿಗಳಿಗೆ ಇದೊಂದು ಪ್ರತಿಭಾ ಪುರಸ್ಕಾರವಾಗಿದೆ. ಈ ದತ್ತಿನಿಧಿಯನ್ನು ಬೇರೆ ಯಾವುದೇ ಉದ್ದೇಶಕ್ಕೂ ಉಪಯೋಗಿಸದೇ ಪ್ರತಿವರ್ಷ ಬರುವ ಬಡ್ಡಿಯಿಂದ ಬಹುಮಾನವನ್ನು ದಾನಿಗಳ ಹೆಸರಿನಲ್ಲಿಯೇ ನೀಡುತ್ತಾ ಬರಲಾಗಿದೆ. ಈಗ ಅನೇಕ ದಾನಿಗಳು ಮರಣ ಹೊಂದಿದ್ದಾರೆ.

ಆಗಿನ ಕಾಲದಲ್ಲಿ ಬಡ್ಡಿದರ ಜಾಸ್ತಿ ಇರುತ್ತಿತ್ತು. ಹೀಗಾಗಿ ಕಡಿಮೆ ಠೇವಣಿ ಇದ್ದರೂ ಬಹುಮಾನ ನೀಡಲು ತೊಂದರೆ ಇರಲಿಲ್ಲ. ಆದರೆ ಈಗ ರೂ. 500 ರ ಬಡ್ಡಿ ಯ ಮೊತ್ತ ಅತ್ಯಲ್ಪವಾಗಿದ್ದು ಈ ತರಹದ ಠೇವು ನಿಭಾಯಿಸುವುದು ಮತ್ತು ಬಹುಮಾನ ವಿತರಣೆ ಮಾಡುವುದು ಸಂಸ್ಥೆಯ ಮತ್ತು ಬಹುಮಾನ ಪಡೆಯುವ ಅರ್ಹ ಮಕ್ಕಳಿಗೆ ಈಗಿನ ದಿನಮಾನದಲ್ಲಿ ಸಮಾಧಾನಕರವಾಗಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಎಂ.ಇ.ಎಸ್. ನ ಹಿತೈಷಿಗಳಾದ ಸರ್ವರೂ ಈ ದತ್ತಿನಿಧಿ ಮೊತ್ತಕ್ಕೆ ಹೆಚ್ಚುವರಿ ಠೇವು ಬರುವಂತೆ ಮಾಡಿದಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಪ್ರೋತ್ಸಾಹ ನೀಡಲು ಅನುಕೂಲ ವಾಗುತ್ತದೆ. ದತ್ತಿನಿಧಿ ಇಟ್ಟವರ ಸಂಬಂಧಿಕರು, ಮಿತ್ರರು, ವಾರಸುದಾರರು ಸ್ವಪ್ರೇರಣೆಯಿಂದ ಮುಂದೆ ಬಂದು ಮೂಲಧನಕ್ಕೆ ಹೆಚ್ಚುವರಿ ಹಣ ಸಂಗ್ರಹವಾಗಲು ಸಹಾಯಮಾಡಬೇಕೆಂದು ಕೋರುತ್ತೇವೆ.

ಅಧ್ಯಕ್ಷರು ಎಂ. ಇ. ಎಸ್.


ಪುಟ ಪ್ರಾಯೋಜಕತ್ವ : ಶ್ಯಾಮಸುಂದರ ಭಟ್, ಕಾಜಿನಮನೆ

## KNOW MES SECOND PRESIDENT



### RAMAKRISHNA HEGDE

Ramakrishna Hegde was the second President for MES for nearly four years from 29/05/1963 to 28/07/1967. He succeeded his mentor Motensar Timmappa Hegde. He was born on 29/08/1926 at Dodmane , Siddapur. He attended primary school at Siddapur and high school at Sirsi and Wardha. He graduated from Kashi Vidyapeeth, Varanasi. and obtained M.A and LLB at Lucknow , Allahabad University. Soon after his return from Lucknow he started law practice at Sirsi court. He began his political career as the President of Uttara Kannada Distric Congress Committe. After the death of Motensar Hegde the founder President of MES, he was requested to take the helm of MES as President while he was a Minister for development and cooperation in the Government. Being a president of our institution he was committed and he monitored the movement of our MES file at different levels of the Government at Bangalore. His relentless efforts and having a remarkable influence in the state cabinet resulted in sanction of 110 acres of land to MES free of cost. Besides this he was so generous to our society that even he got the forest trees standing on the released land for an upset price for construction of our college buildings.

His affiliations during his long political career are: Indian National Congress, Janata Party, Janata Dal and Lok Shakti. Hegde was a flamboyant and charismatic leader with diverse interests always liked by artists, film stars, cricketers and journalists. He was a good orator. He loved reading, writing, golfing, music and cultural programmes. He had command over several languages viz. Kannada, Sanskrit, Hindi, Marathi and Urdu. In 1999, when he was the Union Commerce Minister, he helped to improve the economic conditions arecanut growers of Karnataka when they suffering from falling prices.

He holds a record of presenting 13 financial budgets in the state assembly. He commanded respect even from opposition. During his tenure as the Chief Minister , he initiated many welfare schemes for the weaker sections and the minorities : Distribution of free uniforms and books , widow pension, maternity allowance for working women, debt relief to farmers, implementing Kannada as a language in administration, to name a few. In 1984, he was the first Indian Chief Minister to establish the Lokayukta, to enquire into the corruption charges against ministers and officials.

He served as the third Chief Minister of Karnataka for three terms between 1983 and 1988. He was elected to the Karnataka Legislative Assembly in 1957, 1962, 1967, 1983, 1985 and 1989, and to the Rajya Sabha for two terms, 1978–83 and 1996–2002. He also served as Deputy Chairman of Planning Commission 1989-1990, and the Minister of Commerce and Industry in the Union government 1998–1990.

Political career: He became the General Secretary of the Mysore Pradesh Congress Committee in 1958, a post he held until 1962. Much of his early administrative experience was built up during the governments of S.Nijalingappa (1956–58 and 1962–68) and Veerendra Patil (1968–71). He was first elected to the Karnataka Legislative Assembly in 1957 and appointed a deputy minister. He was later promoted to cabinet-minister rank, holding diverse portfolios such as Youth Welfare and Sports, Cooperation, Industries, Planning, Panchayat Raj, Development, Information and Publicity, Excise and Finance between 1962 and 1971. During the famous split in the Congress in 1969, Hegde followed in the footsteps of his mentor Nijalingappa and joined the Congress (O), the faction that was opposed to Prime Minister Indira Gandhi. He was a Leader of the Opposition in the Karnataka Legislative Council for a few years until 1974. The 1975 Emergency crackdown on opposition leaders saw his arrest along with several other state and national level leaders like Atal Bihari Vajpayee,Madhu Dandavate and L.K.Advani . When the emergency was lifted, he joined the Janata Party and became the first general secretary of its Karnataka state unit. He was a Karnataka leader with national reputation. Sometime people used to express then that he would become one of the best Prime Ministers of India.

As a chief minister, he became an active votary of State rights within a federal set-up, but one who made no concession to regional or linguistic chauvinism. Secondly, he took innovative initiatives in expanding the federal principle within the State, primarily in the area of devolving power to local bodies and in trying to enforce accountability. During his Chief Minister-ship, Karnataka pioneered legislation on Panchayat Raj Institutions that gave a substantial degree of financial and administrative powers to a three-tiered structure of local government in the state. Thus Karnataka became a role model for the rest of India. A versatile personality, Hegde also acted in many dramas and films such as Marana Mrudanga, Prajashakti. He groomed many younger politicians and is known for value based politics. He passed away at the age of 77 on 12/01/2004. MES should be grateful to Ramakrishna Hegde in getting the land for the college.

*Sharada Bhat,*
*Librarian, MM Arts and Science College, Sirsi.*
*(With inputs from G.S.Hegde, M.C.Member of MES)*

*(1 ನೇ ಪುಟದಿಂದ..)*

ಪೂರ್ಣಗೊಳಿಸಿದ ಅಭ್ಯರ್ಥಿಗಳು 'ಲ್ಯಾಟರಲ್ ಎಂಟ್ರಿ ಸ್ಕೀಮ್' ಮುಖಾಂತರ ಸಂಬಂಧಿತ ಹಾಗೂ ನಿಗದಿತ ವೃತ್ತಿಗಳಲ್ಲಿ 3 ವರ್ಷದ ಡಿಪ್ಲೋಮಾ ಇಂಜಿನಿಯರಿಂಗನ 2ನೇ ವರ್ಷಕ್ಕೆ (3ನೇ ಸೆಮಿಸ್ಟರಗೆ) ಪ್ರವೇಶ ಪಡೆಯಬಹುದು.ಹೀಗೆ ಯಶಸ್ವಿಯಾಗಿ ಐ.ಟಿ.ಐ. ತರಬೇತಿ ಯನ್ನು ಪೂರ್ಣಗೊಳಿಸಿದ ಆಸಕ್ತ ಅಭ್ಯರ್ಥಿಗಳು 3 ವರ್ಷದ ಡಿಪ್ಲೋಮಾ ಇಂಜಿನಿಯರಿಂಗನ್ನು 'ಲ್ಯಾಟರಲ್ ಎಂಟ್ರಿ ಸ್ಕೀಮ್' ಮುಖಾಂತರ ಕೇವಲ 2 ವರ್ಷದಲ್ಲಿ ಪೂರ್ಣ ಗೊಳಿಸಿ, ಸಂಬಂಧಿತ ತಾಂತ್ರಿಕ ವಿಷಯದಲ್ಲಿ ಪದವಿ ಪಡೆದು (B.E.) ಸ್ನಾತಕೋತ್ತರ ಪದವಿಯನ್ನೂ ಪಡೆಯುವ ಮುಕ್ತ ಅವಕಾಶವಿದೆ.

2 ವರ್ಷದ ಐ.ಟಿ.ಐ. ಕೋರ್ಸ ಪಿ.ಯು.ಸಿ.ಗೆ ತತ್ಸಮಾನವಾಗಿದ್ದು, ಐ.ಟಿ.ಐ. ತರಬೇತಿ ಪಡೆಯುವ ಸಂದರ್ಭದಲ್ಲಿ ಹೆಚ್ಚುವರಿಯಾಗಿ ಎನ್.ಐ.ಓ.ಎಸ್.ನಲ್ಲಿ 2 ನಿಗದಿತ ವಿಷಯಗಳನ್ನು ತೆಗೆದುಕೊಂಡು ಉತ್ತೀರ್ಣರಾದಲ್ಲಿ, ಐ.ಟಿ.ಐ. ಪೂರ್ಣಗೊಳಿಸಿದ ಅಭ್ಯರ್ಥಿಗಳು ಬಿ.ಎ, ಬಿ.ಕಾಂ, ಬಿ.ಬಿ.ಎ., ಬಿ.ಸಿ.ಎ. ಪದವಿಗಳಿಗೆ ಪ್ರವೇಶ ಪಡೆಯಬಹುದು ಹಾಗೂ ಪಿ.ಯು.ಸಿ. ವಿದ್ಯಾರ್ಹತೆಯ ಮೇಲೆ ಲಭ್ಯವಿರುವ ಸರಕಾರಿ ಉದ್ಯೋಗಾವಕಾಶಕ್ಕೆ ಅರ್ಹರಾಗಿರುತ್ತಾರೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೂಡ ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಮಹತ್ವ ಹಾಗೂ ಆದ್ಯತೆಗಳನ್ನು ನೀಡುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಐ.ಟಿ.ಐ. ತರಬೇತಿ ಪಡೆದ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶದ ಜೊತೆಗೆ ಸ್ವ ಉದ್ಯೋಗ ಮಾಡ ಬಯಸುವವರಿಗೆ ಸರಕಾರದಿಂದ ಅನೇಕ ಸೌಲಭ್ಯಗಳು ಲಭ್ಯವಾಗಲಿದೆ.

ಶಿರಸಿಯ ಪ್ರತಿಷ್ಠಿತ ಎಂ.ಇ.ಎಸ್. ಸಂಸ್ಥೆಯ ಐ.ಟಿ.ಐ. ಎಲ್ಲ ಅಗತ್ಯ ಮೂಲಭೂತ ಸೌಕರ್ಯಗಳನ್ನು ಮತ್ತು ಸುಸಜ್ಜಿತ ಇಲೆಕ್ಟ್ರೀಷಿಯನ್, ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ ಮತ್ತು ಫಿಟ್ಟರ್ ವರ್ಕಶಾಪಗಳನ್ನು ಹೊಂದಿದ್ದು, ಎಸ್.ಎಸ್.ಎಲ್.ಸಿ. ಉತ್ತೀರ್ಣರಾದವರಿಗೆ NCVT ಸಂಯೋಜನೆಗೆ ಒಳಪಟ್ಟ 2 ವರ್ಷದ ಇಲೆಕ್ಟ್ರೀಷಿಯನ್, ಇಲೆಕ್ಟ್ರಾನಿಕ್ಸ್, ಮೆಕ್ಯಾನಿಕ್ ಮತ್ತು ಫಿಟ್ಟರ್ ಕೋರ್ಸಗಳು ಲಭ್ಯವಿದೆ. ಸುಸಜ್ಜಿತ ಕಂಪ್ಯೂಟರ್ ಲ್ಯಾಬ್, ಪರಿಣಿತ ತರಬೇತಿ ಅಧಿಕಾರಿಗಳನ್ನು ಹೊಂದಿರುವ ಎಂ.ಇ.ಎಸ್.ಐ.ಟಿ.ಐ. ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಕುರಿತು ISO 29990:2010 ಪ್ರಮಾಣೀಕರಿಸಲ್ಪಟ್ಟಿದೆ. ಡಿ.ಜಿ. ಇ.ಟಿ. ನ್ಯೂದೆಹಲಿ ಇವರು ಐ.ಟಿ.ಐ.ಗಳ ಗುಣಮಟ್ಟದ ಕುರಿತು ದೇಶದಾದ್ಯಂತ ನಡೆಸಿದ ಐ.ಟಿ.ಐಗಳ ಫೇಸ್–3 ಗ್ರೇಡಿಂಗನಲ್ಲಿ ಎಂ.ಇ.ಎಸ್.ಐ.ಟಿ.ಐ., ಶಿರಸಿ 10 ಗ್ರೇಡಿಂಗ್ ಪಾಯಿಂಟಗೆ 8.2 ಗ್ರೇಡಿಂಗ್ ಪಾಯಿಂಟನ್ನು ಪಡೆದಿದೆ. ನಿಗದಿತ ಪಠ್ಯಕ್ರಮದನುಸಾರ ಸಿದ್ಧಪಡಿಸಿರುವ 3ಡಿ ಇ–ಲರ್ನಿಂಗ್ ಸಾಫ್ಟವೇರ ಮೂಲಕ ಎಲ್ಲ ವಿಷಯಗಳನ್ನು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಬೋಧಿಸುವ ವ್ಯವಸ್ಥೆ ಲಭ್ಯವಿದ್ದು, ಎಲ್ಲ ತರಗತಿಗಳಲ್ಲಿ ಇ–ಲರ್ನಿಂಗ ಸೌಲಭ್ಯವನ್ನು ಒದಗಿಸಲಾಗಿದೆ. ಐ.ಟಿ.ಐ. ತರಬೇತಿ ಮುಗಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಉತ್ತಮ ಉದ್ಯೋಗಾವಕಾಶ ಕಲ್ಪಿಸಿಕೊಡಲು ಪ್ಲೇಸಮೆಂಟ್ ಸೆಲ್ ಹೊಂದಿದೆ. ಕಳೆದ 5 ವರ್ಷಗಳಲ್ಲಿ ಪ್ರತಿ ವರ್ಷ ಎಂ.ಇ.ಎಸ್.ಐ.ಟಿ.ಐ.ನಲ್ಲಿ ತರಬೇತಿ ಪೂರ್ಣಗೊಳಿಸಿದ ಶೇ. 90 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಐ.ಟಿ.ಐ. ಪ್ಲೇಸಮೆಂಟ ಸೆಲ್ ಮುಖಾಂತರ ಉದ್ಯೋಗಾವಕಾಶ ಕಲ್ಪಿಸಿಕೊಡಲಾಗಿದೆ.

ಎಂ.ಇ.ಎಸ್. ಐ.ಟಿ.ಐ. ಪ್ರೊಡಕ್ಷನ್ ಸೆಂಟರನ್ನು ಹೊಂದಿದ್ದು, ಆಸಕ್ತ ಅರ್ಹ ವಿದ್ಯಾರ್ಥಿಗಳಿಗೆ ಕಲಿಕೆಯ ಜೊತೆಗೆ ಗಳಿಕೆಗೆ ಕೂಡ ಅವಕಾಶ ಕಲ್ಪಿಸಿಕೊಡಲಾಗಿದೆ. ಪಠ್ಯಕ್ರಮದ ಜೊತೆಗೆ ಹೆಚ್ಚಿನ ಪ್ರಾಯೋಗಿಕ ತರಬೇತಿಯ ಕುರಿತು ಫಿಲ್ಡ ವರ್ಕಗಳಿಗೆ ಕೂಡ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. 2022–23 ನೇ ಶೈಕ್ಷಣಿಕ ವರ್ಷದಿಂದ ಮಲ್ಟಿ ಸ್ಕಿಲ್‌ಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಇಲೆಕ್ಟ್ರೀಷಿಯನ್ ವೃತ್ತಿಯಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ,ಉಚಿತವಾಗಿ ವೆಲ್ಡಿಂಗ್ ಮತ್ತು ಫ್ಯಾಬ್ರಿಕೇಶನ್ ತರಬೇತಿಯನ್ನು ಮತ್ತು ಇಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ ಹಾಗೂ ಫಿಟ್ಟರ್ ವೃತ್ತಿಯಲ್ಲಿ ತರಬೇತಿ ಪಡೆಯುವ ವಿದ್ಯಾಥಿಗಳಿಗೆ ಇಲೆಕ್ಟ್ರಿಕಲ್ ವೈರಿಂಗ್ ಮತ್ತು ಹೋಂ ಅಪ್ಲೈಯನ್ಸ್ ತರಬೇತಿಯನ್ನು ನೀಡಲಾಗುತ್ತಿದೆ. ಐ.ಟಿ.ಐ. ಮಾಡಲು ಆಸಕ್ತರಿರುವ ಅಭ್ಯರ್ಥಿಗಳು ಶಿರಸಿಯ ಯಲ್ಲಾಪುರ ನಾಕಾ ಹತ್ತಿರ ವಿದ್ಯಾನಗರದಲ್ಲಿರುವ ಎಂ.ಇ.ಎಸ್.ಐ.ಟಿ.ಐ.ನಲ್ಲಿ ಪ್ರವೇಶ ಪಡೆಯಬಹುದಾಗಿದೆ.

ಶ್ರೀ ಗಣೇಶ ಭಟ್ಟ, ಪ್ರಾಚಾರ್ಯರು, ಎಂ.ಇ.ಎಸ್.ಖಾಸಗಿ ಐ.ಟಿ.ಐ. ಶಿರಸಿ
☎: 9008048202/9986122582

## ಎಂ.ಇ.ಎಸ್ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ



09/11/2023ರಂದು ಶಿರಸಿಯ ಸೆಂಟ್ ಆಂತೋನಿ ಶಾಲೆಯಲ್ಲ ನಡೆದ ತಾಲೂಕಾಮಟ್ಟದ ಪ್ರತಿಭಾಕಾರಂಜಿಯ ಆಶುಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ 4ನೇ ತರಗತಿಯ ಶ್ರೀಶ ಮೇಸ್ತ.

# ACHIVEMENTS

## ಎಂ.ಇ.ಎಸ್ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ



2021–22 ರಲ್ಲಿ ಬಿ.ಎ. (ಸಂಗೀತ) ಪರೀಕ್ಷೆಯಲ್ಲಿ ಚಿನ್ನದ ಪದಕ ಪಡೆದ ಅಕ್ಷತಾ ದೇವಾಡಿಗ

### ಬಿ.ಎಸ್ಸಿ. ಫಲಿತಾಂಶ



ಅಪರ್ಣಾ ಹೆಗಡೆ (ಪ್ರಥಮ)



ಅಪೂರ್ವಾ ಹೆಗಡೆ (ಪ್ರಥಮ)



ಸುಪ್ರಿತಾ ಜೋಗಳೇಕರ್ (ದ್ವಿತೀಯ)



ಗಾಯತ್ರಿ ಸಮಂತ್ (ತೃತೀಯ)

ಕರ್ನಾಟಕ ವಿಶ್ವವಿದ್ಯಾಲಯ ಕಳೆದ ಸೆಪ್ಟೆಂಬರನಲ್ಲಿ ನಡೆಸಿದ ಬಿ.ಎಸ್ಸಿ 6ನೇ ಸೆಮಿಸ್ಟರ (ಅಂತಿಮ ವರ್ಷ) ಪರೀಕ್ಷೆಯ ಫಲಿತಾಂಶ ಶೇ.91.76. ಆರು ಸೆಮಿಸ್ಟರ ಫಲಿತಾಂಶವನ್ನು ಪರಿಗಣಿಸಿದಾಗ ಅಪರ್ಣಾ ಹೆಗಡೆ ಮತ್ತು ಅಪೂರ್ವಾ ಹೆಗಡೆ 9.23 ಜಿಪಿಎ ಅಂಕ, ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ, ಸುಪ್ರಿತಾ ಜೋಗಳೇಕರ್ 9.19 ಜಿಪಿಎ ಅಂಕ, ದ್ವಿತೀಯ ಸ್ಥಾನ ಹಾಗೂ ಗಾಯತ್ರಿ ಸಮಂತ್ 9.15 ಜಿಪಿಎ ಅಂಕ, ತೃತೀಯ ಸ್ಥಾನ.

### ಬಿ.ಎ. ಫಲಿತಾಂಶ



ಭರತ್ ಕೊಠಾರಿ (ಪ್ರಥಮ)



ಚಂದ್ರಶೇಖರ ಮರಾಠಿ (ಪ್ರಥಮ)



ಸೌಂದರ್ಯ ನಾಯ್ಕ (ದ್ವಿತೀಯ)



ಸುಷ್ಮಾ ಭಟ್ (ತೃತೀಯ)

ಬಿ.ಎ. 6ನೇ ಸೆಮಿಸ್ಟರ(ಅಂತಿಮ ವರ್ಷ) ಪರೀಕ್ಷೆಯ ಫಲಿತಾಂಶ ಶೇ.92.86. ಆರೂ ಸೆಮಿಸ್ಟರ ಫಲಿತಾಂಶವನ್ನು ಪರಿಗಣಿಸಿದಾಗ ಭರತ್ ಕೊಠಾರಿ ಮತ್ತು ಚಂದ್ರಶೇಖರ ಮರಾಠಿ 8.59 ಜಿಪಿಎ ಅಂಕ , ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ, ಸೌಂದರ್ಯ ನಾಯ್ಕ 8.58 ಜಿಪಿಎ ಅಂಕ, ದ್ವಿತೀಯ ಸ್ಥಾನ ಹಾಗೂ ಸುಷ್ಮಾ ಭಟ್ 8.40 ಜಿಪಿಎ ಅಂಕ, ತೃತೀಯ ಸ್ಥಾನ.

## ಎಂ.ಇ.ಎಸ್. ವಾಣಿಜ್ಯ ಮಹಾವಿದ್ಯಾಲಯ ಬಿ.ಕಾಂ.ಫಲಿತಾಂಶ



ಸಿಂಧು ನಾಯ್ಕ (ಪ್ರಥಮ)



ಸ್ನೇಹಾ ನಾಯಕ (ಪ್ರಥಮ)



ಸಂಜನಾ ಆಚಾರಿ (ದ್ವಿತೀಯ)



ನೋಯೆಲ್ ಫರ್ನಾಂಡಿಸ್ (ತೃತೀಯ)



ಶ್ರೇಯಾ ಹೆಗಡೆ (ತೃತೀಯ)

ಕರ್ನಾಟಕ ವಿಶ್ವವಿದ್ಯಾಲಯ ಕಳೆದ ಸೆಪ್ಟೆಂಬರನಲ್ಲಿ ನಡೆಸಿದ ಬಿ.ಕಾಂ. 6ನೇ ಸೆಮಿಸ್ಟರನ ಪರೀಕ್ಷೆಯ ಫಲಿತಾಂಶ 99.04%. ಒಟ್ಟೂ 314 ವಿದ್ಯಾರ್ಥಿಗಳಲ್ಲಿ ಡಿಸ್ಟಿಂಕ್ಷನ್–277, ಹಾಗೂ ಪ್ರಥಮ ಶ್ರೇಣಿ–29.ಸಿಂಧು ನಾಯ್ಕ ಹಾಗೂ ಸ್ನೇಹಾ ನಾಯಕ 9.49 ಸಿ.ಜಿ.ಪಿ.ಎ ಅಂಕ, ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ, ಸಂಜನಾ ಆಚಾರಿ 9.47 ಸಿ.ಜಿ.ಪಿ.ಎ ಅಂಕ, ದ್ವಿತೀಯ. ಸ್ಥಾನ. ನೋಯೆಲ್ ಫರ್ನಾಂಡಿಸ್ ಹಾಗೂ ಶ್ರೇಯಾ ಹೆಗಡೆ ,9.34 ಸಿ.ಜಿ.ಪಿ.ಎ ಅಂಕ, ತೃತೀಯ ಸ್ಥಾನ.



13/10/2023ರಂದು ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ದಸರಾ ಕ್ರೀಡಾಕೂಟದ ಗುಂಡು ಎಸೆತ(Shot-put) ಸ್ಪರ್ಧೆಯಲ್ಲಿ ಚಿನ್ನದಪದಕ ಗಳಿಸಿದ 3ನೇ ಸೆಮಿಸ್ಟರ್ ವಿದ್ಯಾರ್ಥಿನಿ ನವ್ಯಾ ಭಟ್. ಇದು ದಸರಾ ಕ್ರೀಡಾಕೂಟದಲ್ಲಿ 10 ವರ್ಷಗಳ ನಂತರ ಶಿರಸಿಗೆ ದೊರೆತ ಮೊದಲ ಚಿನ್ನದಪದಕ ಎನ್ನುವುದು ವಿಶೇಷ.

10/11/2023ರಂದು ನಡೆದ ಸೀನಿಯರ್ ಚೇಂಬರ್ ಇಂಟರನ್ಯಾಶನಲ್,ಮಾರಿಕಾಂಬಾ ಘಟಕ ಏರ್ಪಡಿಸಿದ್ದ ಭಾಷಣ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ 5ನೇ ಸೆಮಿಸ್ಟರನ ವಿದ್ಯಾರ್ಥಿನಿ ವಿನುತಾ ಭಟ್ಟ.





ಪುಟ ಪ್ರಾಯೋಜಕತ್ವ : **ನರೇಂದ್ರ ಹೆಗಡೆ, ಹೊಂಡಗಾಶಿ**

## M.E.S. History - 2

*(Continued from previous issue)*

# A Reminiscence- Five and Half Decades at MES

**Dr. V. S. Sonde**
Former President, Modern Education Society, Sirsi



International Rotary Association through its President of Rotary Club Dandeli along with some members visited Sirsi in August 1959 and discussed with social workers to start the activities of Rotary Club in Sirsi. Senior member Shri R.P.Prabhu was nominated as the President and Shri G.S.Hegde Ajjibal was nominated as the Secretary of Sirsi Rotary Club. On 29 February 1960 the club received registration certificate from Rotary International. Then onwards Sirsi Rotary club started working with four wings like club service, community service, international service and vocational service. As a part of community service a lot of discussion was held both in sub-committee and weekly club meetings in 1959-60, 1960-61 about the need of a degree college at Sirsi. A committee was formed under the chairmanship of Dr.P.O.Mathew , the then President of Rotary Club. The Rotary Club decided to organize a public meeting to consult the people of Sirsi and the surrounding areas . On Sunday, 01-01-1961 a public meeting was arranged in the central hall of Marikamba Highschool Sirsi under the chairmanship of Shri Motensar Timmappa Hegde the honorable member of Vidhana Parishad of New Mysore State . More than 250 experienced senior people from tauks of Sirsi, Siddapur, Yallapur, and Mundgod participated in this meeting. Dr.Mathew welcomed everybody and presented the subject of starting of First Grade degree college in Sirsi to provide higher education to the children of Sirsi region initiating a new education society to start higher education in Sirsi. After two hours of discussion it was unanimously decided to offer university education for the students of this region.

It was decided to begin with degree course in Arts and Science. Under the presidentship of Shri Motensar Timmappa Hegde an ad hoc committee was formed inclusive of 25 members. On that day itself Shri Motensar Timmappa Hegde announced Rs ten thousand as donation. Similarly many other honorable members come forward to donate money as donation. Shri Motensar Timappa Hegde was unanimously nominated as the President of ad hoc committee. The office bearers of the committee were declared as follows. Vice Presidents : 1)Shri R. P. Prabhu 2) Shri Shreepad Ramkrishna Hegde Kadave, General Secretary : Shri G.V.Dhakappa, Joint Secretaries : 1) Shri V.S.Sonde 2) Shri Gajanana Sharma Kallala, Treasurer : Shri R.G.Deshpande.

Then it was decided to prepare a bylaw of the committee including 25 members in its body. A Sub-Committee was formed to frame bylaws. The members of this committee were Shri G.S.Hegde, Ajjibal ,Shri R.G.Bhat, Shri Gajanana Sharma Kallala , Shri R.G.Deshpande, Shri G.V.Dhakappa, and Shri V.S.Sonde. The members of this committee studied the bylaws of many reputed educational institutions from Karnataka and Pune in Maharashtra and prepared the final draft borrowing suitable rules and regulation to run the institution.

The question of giving a suitable name was discussed in the ad hoc committee in which many names were proposed. Finally the name "Modern Education Society' was liked by all the members as proposed by Dr.P.O.Mathew . Moreover it was discussed to present the proposal regarding our initiatives to start degree courses with different subjects before the affiliation committee of Karnataka University Dharwad.

Resolution was passed unanimously by the ad hoc committee to approve the bylaw followed by preparation for registration. This task was given to me. In June 1961 I met our MES President Shri Timmappa Hegde at Bangalore and handed over all documents related to registration of the society. By the influence of Shri Ramakrishna Hegde member of legislative assembly in Mysore State who was elected from Sirsi-Siddapura constituency, the registration was done within an hour. We left the office getting bylaw copy and registration certificate after having a cup of tea offered by the Registrar.

In order to start First Grade College in Sirsi M.E.S Management sent me to Karnataka University Dharwad to submit our proposal with two thousand rupees to get the University affiliation before 30th September 1961.

I met the Registrar Shri S.S.Wodeyar along with his friend and classmate Shri S.D.Kamat , a well known building contractor at Haveri at his residence at 7:00 am. As he suggested to submit some more documents I come back to Sirsi and successfully submitted the affiliation proposal to the University.

It was mandatory to deposit an amount of Rs.3,00,000/- to get the permission from the university to start a degree college . Knowing the difficulty of achieving this goal we consulted Shri Mahabala Shetty the President of Town Municipality , Shri S.S.Keshawain the President of Sirsi Urban Co-operative Bank, Shri S.S.Dhakappa President of Marikamba temple trustee committee , Shri S.R.Hegde Kadave President of Totagars Sale Society and requested them to help financially. All the four organisations responded favorably . Sirsi Town Municipality agreed to provide twenty thousand rupees every year for a period of ten years. The above said organizations also came forward to provide five thousand rupees per year for five years. As a result of this, Karnataka university affiliation committee arrived at Sirsi and visited the above said four organizations . The delegates were given a warm welcome and handed over the copy of resolution made in the directors meeting of the respective organizations regarding their decision to help M.E.S Society to start first grade degree college in Sirsi.

*(Original Kannada article in the souvenir "Jnanasudha" published during MES Habba 2017 by MES. English translation by K. S. Goudar, Retired Lecturer, MES M. M. Arts and Science College)*

*(To be continued to next issue)*

# ALUMNI CORNER

## How I organized the Golden Jubilee Celebration of MES Telang (formerly Sahyadri) High School



*Quote: "Never underestimate the power of hope. Hope is what inspires, hope is what encourages, hope is what empowers and without hope, nothing worthwhile can be accomplished. However, hope alone is just wishful thinking. Pair hopes with a sound strategy, a detailed plan, and a lot of hard work and nothing is out of reach."*

From the book "The Wisdom of the Bullfrog" by Admiral William H. McRaven retired US Navy officer.

My name is Anand Hegde. My hometown is Sirsi (Sahyadri Colony). I have been living in Ridgewood, New Jersey, the United States for over 30 years now. I am a proud alumnus of Telang (formerly Sahyadri) High School. I was a student SSLC batch 1982.

Background: Some time back in mid-2022, I heard that the high school had completed 50 years of its existence. Our English teacher (now retired) S.S. Bhat Sir had written a beautiful story on the high school's history and appealed for the Golden Jubilee celebration in his daily "Chintane" column that he writes on his Facebook wall. I was happy to know and was willing to do my part as needed.

A year passed and unfortunately nothing happened during that period!! S.S. Bhat Sir expressed his disappointment in his column "Chintane" sometime around June 2023. He noted in his column that the high school is really a " ನತದೃಷ್ಟ " high school because no one seems to care!!. He made a desperate appeal to his ex-students to come to the high school and light 50 lamps as a symbolic gesture to mark the 50th anniversary.

When I read his column, the word "ನತದೃಷ್ಟ" really hit me hard and I was really heartbroken!! I decided that I had to do something, more than just a symbolic gesture of lighting 50 lamps!! However, since I live in the USA, I started thinking how I am going to do it and "hoped" that I could do it. So, I decided to pair my "hope" with "a great strategy, a solid plan, and dedicated work" with a single goal in mind.

Fast Forward: As there was no record of any high school alumni students, I decided to create a Google form to gather information. I requested basic information and along with that, asked whether they wanted to celebrate the golden jubilee of the high school and whether they wanted to contribute money of their chosen amount. The response was overwhelming. I knew then that there was a lot of interest and the golden jubilee celebration could be done!! All had shared their mobile numbers on the Google form. So, I created a WhatsApp group called "Sahyadri Telang Alumni Community". The news started circulating and more and more alumni sent information via Google form and that is how the group started growing. There are over 280 high school alumni in the group now.

As there was no registered alumni association and associated bank account, the next hurdle was collecting contributions from alumni. I found out that creating the registered alumni association and opening a bank account was impossible (because I lived in the US). So, I opted to share my personal bank account and decided to start collecting the contribution.

I had decided to keep everything 100% transparent from the beginning. I shared names of the contributors, daily total contribution received etc with the group. I had given a choice to alumni to contribute the amount of their choice, starting from Rs. 100 to Rs. 500, Rs1000 etc up to Rs. 5000 or more. The response again was overwhelming. It was as if the alumni community desperately wanted to get together and celebrate the golden jubilee celebration of their beloved high school. The money started coming in. Alumni community trusted me and supported my approach. Many alumni shared the information within their friend's circle and helped as well. It was heartening to see the overwhelming response from the alumni community and their eagerness to contribute, and be part of the celebration.

Now that I knew there was money for the golden jubilee celebration, next was to lay out a plan to execute the program. While I was still in the US, I started envisioning certain things for the celebration and started discussing my plans with S. S. Bhat Sir. I also wanted a team in Sirsi to support my grand plan. I came to know that local alumni Manjunath Shetty, Sudheer Shanbhag, Harish Bhat, Praveen Shet and many others were eagerly waiting to join hands to celebrate.

The golden jubilee celebration was planned for September 10, 2023. We had our first meeting on August 27th at the high school. Many local alumni came to the meeting. Most of the retired teachers came as well. The meeting with teachers was a first for many, including myself after many years.




Voluntary work by aluminus Sudheer Shanbhag

I presented my grand plan to the audience and we discussed and fine-tuned the program. Manjunath, Harish, Praveen and Sudheer took major responsibilities such as decoration of the school, stage arrangement, audio and video arrangement etc. Venkatesh Hegde, Hosabale announced in that meeting that he would sponsor the breakfast and lunch. Many others joined hands to take care of other smaller responsibilities. We planned for a morning session for alumni and teachers only and a public afternoon session to celebrate the 50th anniversary. We also decided to have a "Guruvandane" to thank all retired teachers and support staff.

The MES management was thrilled too and they extended their unconditional support and even sponsored the light snacks and tea for the afternoon session. The current teachers and students were extremely helpful. They took care of making the school beautiful for the occasion. Everyone supported my vision and supported wholeheartedly.

September 10, 2023 was truly magical. Alumni came from Delhi, Pune, Goa, Bangaluru and many other places. The fact that alumni travelled from various parts of the country to attend the event highlight the strong bond they share with their alma mater. The morning session, which was only for alumni and teachers, was emotional for everyone. Many classmates and teachers were seeing each other after 40+ years. All were so happy to see one another that their faces were glowing with happiness. It was memorable to all who attended.

**Donations can be made both in kind / Cheque**

The contribution to MES enjoys recognition u/s 80G of Income Tax Act.
Details for remittance: Name: Modern Education Society ,
Bank: Union Bank of India, Branch Sirsi,
A/c No: 520101231417663, IFSC : UBIN0901164.
(Please send your Name, Address and
PAN to M.E.S. E-mail/ Whatsapp to get receipt.)

The afternoon session was more official and celebration included honoring the retired teachers and entertainment program. The program was attended by the local MLA, MES management, current teachers, students, parents and general public. The program was web casted live on YouTube for the alumni who couldn't come to the celebration.

On behalf of alumni, an appeal for smart class was presented to the MLA, Shri Bheemanna and he graciously made an announcement on the stage that he would provide funding for 3 smart classes for the high school.

A total of about Rs.10 lakhs was raised from the alumni community in about 2 months' time. The team also managed to receive Rs.43,000 contributions from local banks, businesses and well wishers of the high school as well. We spent around Rs. 2 lakhs for the golden jubilee celebration. We also gave initial gifts such as a water purifier unit, sanitary burning unit, some sports equipment worth about Rs.84, 000. The remaining amount (about Rs.7.4 lakhs) is set aside to make educational and other improvements to our beloved MES Telang (former Sahyadri) High School in the coming years.

My experience is a testament to Admiral McRaven's words about the combination of hope, a sound strategy, detailed planning, and hard work leading to success. Leadership, paired with the support of a committed team, have not only made the Golden Jubilee celebration a memorable event to all participants.

Lastly, be honest, be transparent, and believe in what you do. You will succeed. I trust that my experience will inspire others to take initiative and make a positive impact.

This is how the Golden Jubilee celebration of the MES Telang (formerly Sahyadri) High School became the talk of the town and was so successful.

E-mail: anand.hegde@gmail.com

Register yourself at MES Alumni Data by visiting *www.messirsi.org*

## ಓದುಗರ ಸ್ಪಂದನೆ

ನಮ್ಮ ಅಜ್ಜ ದಿ. ತಿಮ್ಮಪ್ಪ ಹೆಗಡೆ ಮೋಟಿನಸರ ಇವರ ಬಗ್ಗೆ ಬರೆದ ಲೇಖನವನ್ನು 2023ರ ಜುಲೈ-ಸಪ್ಟೆಂಬರ್ ಸಂಚಿಕೆಯಲ್ಲಿ ಓದಿ ಸಂತೋಷವಾಯಿತು. ಮುಂದಿನ ದಿನಗಳಲ್ಲಿ ಪತ್ರಿಕೆಯು ಇನ್ನೂ ಆಕರ್ಷಕವಾಗಿ ವೈವಿಧ್ಯಮಯವಾಗಿ ಬರಲಿ ಎಂದು ಆಶಿಸುತ್ತೇನೆ.

ತಿಮ್ಮಪ್ಪ ಮಂಜುನಾಥ ಹೆಗಡೆ (ಮೋಟಿನ್ಸರ ತಿಮ್ಮಪ್ಪ ಹೆಗಡೆಯವರ ಮೊಮ್ಮಗ)

ಎಂ.ಇ.ಎಸ್. ಇ-ತ್ರೈಮಾಸಿಕ ಪತ್ರಿಕೆಯ ಪ್ರಥಮ ಸಂಚಿಕೆಯು ವಾಟ್ಸಾಪ್‌ನಲ್ಲಿ ಬಂದಿದೆ. ಉಪಯುಕ್ತ ಮಾಹಿತಿಯನ್ನೊಳಗೊಂಡ ಪತ್ರಿಕೆಯು ಎಂ.ಇ.ಎಸ್.ನ ಸಂಸ್ಥೆಯ ಪ್ರಗತಿಗೆ ಪೂರಕವಾಗಿದೆ.

ಎಂ. ಆರ್. ಹೆಗಡೆ, ತಾರೆಹಳ್ಳಿ ಸದಸ್ಯರು, ಎಂ.ಇ.ಎಸ್. (ಯಲ್ಲಾಪುರ ತಾಲೂಕು)

### ಎಂ.ಇ.ಎಸ್. ಆಂಗ್ಲ ಮಾಧ್ಯಮ ಶಾಲೆ



18/11/2023: ಶನಿವಾರದ ಬ್ಯಾಗ್ ರಹಿತ ದಿನದ ಅಂಗವಾಗಿ ಏರ್ಪಡಿಸಲಾದ ಆಹಾರ ಮೇಳ



15/12/2023: ವಾರ್ಷಿಕ ಕ್ರೀಡಾಕೂಟ ಉದ್ಘಾಟನೆ

### ಎಂ.ಇ.ಎಸ್ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ



9/10/2023:
ಹೆಣ್ಣು ಮಕ್ಕಳ ಸುರಕ್ಷತೆಗೆ "ಅಂತರಾಷ್ಟ್ರೀಯ ಹೆಣ್ಣು ಮಕ್ಕಳ ದಿನ"ದ ಆಚರಣೆ

## ಎಂ.ಇ.ಎಸ್. ಚಿತ್ರವಾರ್ತೆ



21/11/2023ರಿಂದ 27/11/2023ರವರೆಗೆ ಎಂ.ಇ.ಎಸ್. ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್‌ನಲ್ಲಿ "ಭಗವದ್ಗೀತಾ ಅಭಿಯಾನ "ಕಾರ್ಯಕ್ರಮ.

ಎಂ.ಇ.ಎಸ್ ಎಂ.ಎಂ.ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ಪ್ಯಾಷನ್ ಡಿಸೈನ್ ಕೋರ್ಸ ಆರಂಭ



## ACHIVEMENTS

### ಎಂ.ಇ.ಎಸ್ ಪದವಿಪೂರ್ವ ಮಹಾವಿದ್ಯಾಲಯ



22/11/2023ರಂದು ಸರ್ಕಾರಿ ಪದವಿಪೂರ್ವ ಮಹಾವಿದ್ಯಾಲಯ ಅಂಕೋಲಾದಲ್ಲಿ ನಡೆದ ಜಿಲ್ಲಾಮಟ್ಟದ ಅಣಕು ಸಂಸತ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಶಾಖ ಭಟ್ಟ ಹಾಗೂ ದ್ವಿತೀಯ ಸ್ಥಾನ ಪಡೆದ ಧನ್ಯ ಹೆಗಡೆ

### ಎಂ.ಇ.ಎಸ್. ಚೈತನ್ಯ ಪದವಿಪೂರ್ವ ಮಹಾವಿದ್ಯಾಲಯ

24/11/2023ರಂದು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಶಾಲಾ ಶಿಕ್ಷಣ ಇಲಾಖೆ ಪದವಿಪೂರ್ವ ಕಾಲೇಜುಗಳ ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಹ್ಯಾಮರ್ ಎಸೆತದ ಸ್ಪರ್ಧೆಯಲ್ಲಿ 66.95ಮೀ. ದೂರ ಎಸೆದು ಹೊಸ ಕೂಟ ದಾಖಲೆಯೊಂದಿಗೆ ಚಿನ್ನದ ಪದಕ ಗಳಿಸಿದ ದ್ವಿತೀಯ ವರ್ಷದ ವಾಣಿಜ್ಯ ವಿದ್ಯಾರ್ಥಿ ಯಶಸ್ ಕುರುಬರ್.



### ಎಂ.ಇ.ಎಸ್. ನರ್ಸಿಂಗ್ ಕಾಲೇಜು



ಮಿಸ್ಬಾ ಶೇಖ್



ಅಕ್ಷತಾ ಕಬ್ಬೇರ್

2/11/2023ರಂದು ಶ್ರೀ ಸತ್ಯಸಾಯಿ ಸೇವಾ ಸಂಸ್ಥೆಗಳು, ದಕ್ಷಿಣ ವಲಯದ ಅಡಿಯಲ್ಲಿ ಆಯೋಜಿಸಿದ್ದ ಡಿಗ್ರಿ ಕಾಲೇಜು ವಿಭಾಗದ ಇಂಗ್ಲೀಷ್ ಪ್ರಬಂಧ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ತೃತೀಯ ರ್‍ಯಾಂಕ್ ಪಡೆದ ಮಿಸ್ಬಾ ಶೇಖ್ ಹಾಗೂ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ರ್‍ಯಾಂಕ್ ಪಡೆದ ಅಕ್ಷತಾ ಕಬ್ಬೇರ್.

### ಎಂ.ಇ.ಎಸ್. ಆಂಗ್ಲ ಮಾಧ್ಯಮ ಶಾಲೆ



09/11/2023ರಂದು ಶಿರಸಿಯ ಸೆಂಟ್ ಆಂತೋನಿ ಶಾಲೆಯಲ್ಲಿ ನಡೆದ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿಯ ಜನಪದ ನೃತ್ಯದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆಯಾದ ಅನುಷಾ ಹಾಗೂ ಸಂಗಡಿಗರು.

### ಎಂ.ಇ.ಎಸ್. ತೇಲಂಗ ಪ್ರೌಢಶಾಲೆ

8/12/2023ರಂದು ನಡೆದ ತಾಲೂಕಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಕಾವ್ಯಾ ತೇಗಣ್ಣನವರ್



BOOK-POST PRINTED MATTER

If Undelivered, please return to :
MES e- Quarterly Newsletter
Modern Education Society (MES),
Vidyanagar, Sirsi- 581402,
Uttara Kannada District, Karnataka
Mob: +91 7019795455
e-mail : mesacademics1@gmail.com
Website: www.messirsi.org

Published by Venkatgiri Hegde,
Faculty MES, on behalf of MES and
Printed at Chetana Co-op. Printing Press, Sirsi
☏ :08384-414526

To

## ಎಂ.ಇ.ಎಸ್. ಚಿತ್ರವಾರ್ತೆ

### ಎಂ. ಇ. ಎಸ್. ಎಂ. ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ

04/11/2023: 'ನಶಾ ಮುಕ್ತ ಭಾರತ' ಅಭಿಯಾನ ಕಾರ್ಯಕ್ರಮದಲ್ಲ ಖ್ಯಾತ ಮನೋಚಿಕಿತ್ಸಕ ಡಾ. ಸಚಿನ್ ಪರಬ್, ಮುಂಬೈ ಅವರ ಉಪನ್ಯಾಸ.







30/10/2023: "ರಾಷ್ಟ್ರೀಯ ಭಾವೈಕ್ಯತೆಗೆ ಏಕರೂಪ ನಾಗರಿಕ ಸಂಹಿತೆ ಅಗತ್ಯವಿದೆ" ಎಂಬ ವಿಷಯದ ಕ್ಲಸ್ಟರ್ ಮಟ್ಟದ ಚರ್ಚಾಸ್ಪರ್ಧೆಯ ಉದ್ಘಾಟನಾ ಕಾರ್ಯಕ್ರಮ

### ಎಂ. ಇ. ಎಸ್. ಕಾನೂನು ಮಹಾವಿದ್ಯಾಲಯ



10/12/2023: ರಾಷ್ಟ್ರೀಯ ಮಾನವ ಹಕ್ಕು ದಿನಾಚರಣೆ



30/11/2023: ಕನಕದಾಸ ಜಯಂತಿ ಕಾರ್ಯಕ್ರಮ

### ಎಂ. ಇ. ಎಸ್. ನರ್ಸಿಂಗ್ ಕಾಲೇಜು




04/11/2023: ಶಿರಸಿಯ ಹೆಗಡೆಕಟ್ಟಾದಲ್ಲ ಆಯೋಜಿಸಲಾಗಿದ್ದ ಆರೋಗ್ಯ ಅಭಿಯಾನ ಕಾರ್ಯಕ್ರಮ

01/12/2023: "ವಿಶ್ವ ಏಡ್ಸ್ ನಿರ್ಮೂಲನಾ ದಿನ"ದ ಪ್ರಯುಕ್ತ ಏರ್ಪಡಿಸಲಾದ ಕಾರ್ಯಕ್ರಮ




### ಎಂ. ಇ. ಎಸ್. ಪದವಿಪೂರ್ವ ಮಹಾವಿದ್ಯಾಲಯ



06/12/2023: ವಿದ್ಯಾರ್ಥಿಗಳಿಗೆ ಕರಕುಶಲ ತರಬೇತಿ ಕಾರ್ಯಾಗಾರ

10/11/2023: ಶಿರಸಿ ರೋಟರಿ ಕ್ಲಬ್ ವತಿಯಿಂದ ನಡೆದ ಕರಿಯರ್ ಗೈಡನ್ಸ ಕಾರ್ಯಕ್ರಮ




### ಎಂ.ಇ.ಎಸ್. ಚೈತನ್ಯ ಪದವಿಪೂರ್ವ ಮಹಾವಿದ್ಯಾಲಯ

06/12/2023: ವಿಜ್ಞಾನ ಮತ್ತು ವಾಣಿಜ್ಯ ವಸ್ತು ಪ್ರದರ್ಶನ ಉದ್ಘಾಟನಾ ಕಾರ್ಯಕ್ರಮ





12/12/2023: ರಕ್ತ ತಪಾಸಣಾ ಶಿಬಿರ

### ಎಂ. ಇ. ಎಸ್. ಖಾಸಗಿ ಐ. ಟಿ. ಐ.

17/12/2023: ವ್ಯಕ್ತಿತ್ವ ವಿಕಸನ ಮತ್ತು ಉದ್ಯೋಗಾವಕಾಶಗಳ ಕುರಿತು ಕಾರ್ಯಾಗಾರ





4/12/2023: ಮತದಾನದ ಮಹತ್ವ ಮತ್ತು ಹೊಸ ಮತದಾರರ ನೋಂದಣಿ ಕುರಿತು ಜಾಗೃತಿ ಕಾರ್ಯಕ್ರಮ



ಪುಟ ಪ್ರಾಯೋಜಕತ್ವ : ನಿತಿನ್ ಕಾಸರಕೋಡ್, ಲಕ್ಷ್ಮೀ ಟ್ರೇಡ್ ಲಿಂಕ್ಸ್, ಶಿರಸಿ